3. ವಿಷಯ: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ:

ಶ್ರೀ ಟಿ.ವಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿಯ ನಿಧಿಯ ಅಡಿಯಲ್ಲಿ ಕೈಗೊಂಡಿರತಕ್ಕಂಥ ಕಾಮಾಗಾರಿಗಳಿಗೆ ಹಣ ಪಾವತಿಯಲ್ಲಿ ಕೈಗೊಂಡಿರುವ ಕಾಮಾಗಾರಿ ಅನುಷ್ಠಾನದ ಪರಿಶೀಲನೆ ಬಗ್ಗೆ ಮೂರನೇ ಹಂತದ ಪರಿವೀಕ್ಷಣೆಯಿಂದಾಗಿ ಹಣ ಪಾವತಿಸಲು ವಿಳಂಬವಾಗಿ ಅನೇಕ ಕಾರ್ಯಕ್ರಮಗಳು ಮುಗಿದು ವರ್ಷಗಟ್ಟಲೆ ಬಾಕಿ ಇರುವುದರಿಂದ ಗುತ್ತಿಗೆದಾರರಿಗೆ ತೊಂದರೆ ಆಗಿದೆ. ಶಾಸಕರ ಪ್ರವೇಶಾಭಿವೃದ್ಧಿ ನಿಧಿ ಖರ್ಚಾಗದೆ ಬಾಕಿ ಇರತಕ್ಕಂಥ ವಿಚಾರದಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆಯಲು ನಾನು ಪ್ರಯತ್ನಿಸುತ್ತಿದ್ದೇನೆ.

ಶ್ರೀ ಎಸ್.ಶಿವಣ್ಣ (ಪರಿಸರ ಮತ್ತು ಜೀವಿಶಾಸ್ತ್ರ ಯೋಜನೆ ಮತ್ತು ಸಾಂಖ್ಯಿಕ ಸಚಿವರು):– ಅಧ್ಯಕ್ಷರೆ, ಈಗ ಉತ್ತರವನ್ನು ಕೊಟ್ಟಿದ್ದೇವೆ. ಪೇಮೆಂಟ್ ಮಾಡುವುದಕ್ಕೆ ದುರಾದೃಷ್ಟ ಏನಾಗಿದೆ ಎಂದರೆ 75% ಖರ್ಚು ಮಾಡಬೇಕೆಂದು ನಮ್ಮ ರೂಲ್ಸ್‌ನಲ್ಲಿ ಇದೆ. ಅದನ್ನೂ ಸಡಿಲ ಮಾಡಿ ಕೊಟ್ಟಿದ್ದೇವೆ. ಈಗ ಏನಾಗಿದೆ ಎಂದರೆ ಅವರು 3rd party inspection ಬೇಕೆಂದು ನನ್ನ ಹತ್ತಿರ ಮಾತನಾಡಿದ್ದಾರೆ. ನಾವು ಸಡಿಲ ಮಾಡಿರತಕ್ಕದರ ಬಗ್ಗೆ ನಾಳೆ ಸುತ್ತೋಲೆ ಕೊಡುತ್ತೇವೆ ಅದಕೋಸ್ಕರ ಏನು ಜಯಚಂದ್ರ ರವರು ಕೇಳಿದ್ದಾರೆ, ಅದಕ್ಕೆ ನಾವು ಸ್ಪಂದಿಸಿ ಸ್ಥಳೀಯ ಕ್ಷೇತ್ರಾಭಿವೃದ್ಧಿ ಹಣ ಖರ್ಚಾಗಬೇಕು, ಅದಕ್ಕೆ ಖರ್ಚಾಗುವಂಥದ್ದಕ್ಕೆ ಅನುವು ಮಾಡಿಕೊಡುತ್ತೇವೆ. 75% ಏನು ಖರ್ಚು ಮಾಡಿದೆ, ಅದನ್ನು ತಕ್ಷಣ ಬಿಡುಗಡೆ ಮಾಡುವುದು ಇದೆ. 10 ಜಿಲ್ಲೆಯಲ್ಲಿರತಕ್ಕ ಜಿಲ್ಲಾಧಿಕಾರಿಗಳು ನಮಗೆ ಕಳುಹಿಸಿದ್ದಾರೆ. ಅದನ್ನು ನಾವು ನಿನ್ನೆ ಬಿಡುಗಡೆ ಮಾಡಿದ್ದೇವೆ. ಹಣದ ಕೊರತೆ ಇಲ್ಲ. ಬಿಡುಗಡೆ ಮಾಡುವುದಕ್ಕೂ ಏನು ತೊಂದರೆ ಇಲ್ಲ.

ಅಧ್ಯಕ್ಷರು:– ಮಾನ್ಯ ಕರುಣಾಕರರೆಡ್ಡಿ ಯವರು.

(ಗೊಂದಲ)

ಶ್ರಿ ಟಿ.ಬಿ. ಜಯಚಂದ್ರ:– ಅವರು ಕೊಟ್ಟಿರುವುದು ಒಂದು, ಹೇಳುತ್ತಿರುವುದು ಒಂದು. ಸರ್ಕಾರಿ ಆದೇಶ ಸಂಖ್ಯೆಯಲ್ಲಿ 5 ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಹೆಚ್ಚು ಕೈಗೊಂಡು ಪೂರ್ಣಗೊಳಿಸಿದ

ಕಾಮಗಾರಿಯ ಗುಣಮಟ್ಟವನ್ನು ಅಳೆಯಲು ಆಯಾಯ ನೋಡಲ್ ಮುಖ್ಯಾಧಿಕಾರಿಗಳು ಮೌಲ್ಯಮಾಪನ ಕೈಗೊಳ್ಳಬೇಕಾಗಿದೆ ಎಂದು ಹೇಳುತ್ತಾರೆ. ಪೇಮಂಟ್ ಎಲ್ಲಿ ಆಗುತ್ತದೆ?

(ಗೊಂದಲ)

ಶ್ರೀ ಜೆ. ಶಿವಣ್ಣ:- ಮಾನ್ಯ ಜಯಚಂದ್ರರವರು ಮುನಿಯಪ್ಪರವರು ಕೇಳಿರತಕ್ಕಂಥದ್ದು, ಮಾನ್ಯ ಕುಮಾರಸ್ವಾಮಿ ಕೇಳಿರತಕ್ಕಂಥದ್ದು ಎಲ್ಲಾ ಒಂದೇ ನಾವು ಕೊಡಬೇಕಾಗಿರುವ ಹಣವನ್ನು ಈಗ ನಾವು ಬಿಡುಗಡೆ ಮಾಡಿದ್ದೇವೆ. ಖರ್ಚಾಗುವಂಥ ಹಣ ಉಳಿದೆದೆ. 3rd party inspection ಮಾಡಬೇಕೆಂದು ಇತ್ತು ಅದನ್ನು ತೆಗೆದುಹಾಕಿ Executive Engineer Level ನಲ್ಲಿ ಮಾಡಬೇಕು ಎಂದು ಇತ್ತು, ಅದನ್ನು ಮಾಡಿದ್ದೇವೆ. ಸುತ್ತೋಲೆ ನಾಲೆ ಹೋಗುತ್ತದೆ. ಅದಕ್ಕೆ ತಾವು ಸ್ಪಂದಿಸಬೇಕು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- PACನಲ್ಲಿ ತಮ್ಮ ಎದುರಿಗೆ ಮೂರು ಬಾರಿ ಚರ್ಚೆಯಾಗಿದೆ, ಮತ್ತೆ ಅದೇ ಉತ್ತರವನ್ನು ಕೊಡುತ್ತಿದ್ದಾರೆ. ನಾವು ಏನು ಮಾಡಬೇಕು ಹೇಳಿ?

ಅಧ್ಯಕ್ಷರು:- Guidelines ಎಲ್ಲಾ change ಮಾಡಿ ಆಗಿದೆ. ಅದರ ಪ್ರಕಾರ direction ಕೊಡಿ.

ಶ್ರೀ ಎಸ್.ಶಿವಣ್ಣ:- ಅಧ್ಯಕ್ಷರೇ guidelines change ಮಾಡಿಯೇ ನಾವು ಮಾಡಿರುವುದು. ಅದನ್ನು ನಾನು ಚುಟುಕಾಗಿ ಹೇಳಿದೆ ಅಷ್ಟೆ.

ಅಧ್ಯಕ್ಷರು:- ಸ್ಪಷ್ಟವಾಗಿ ನಿಮ್ಮ ಅಧಿಕಾರಿಗಳಿಗೆ ಹೇಳಿ.

ಶ್ರೀ ಎಸ್.ಶಿವಣ್ಣ:- ಆಯಿತು.

ಅಧ್ಯಕ್ಷರು:- ಮಾನ್ಯ ಕರುಣಾಕರರೆಡ್ಡಿಯವರು ಮಾತನಾಡಿ.

4. ವಿಷಯ: ಕೇಂದ್ರ ಸರ್ಕಾರ ರಾಜ್ಯದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಈ 6 ಜಿಲ್ಲೆಗಳಿಗೆ ಪ್ರಾದೇಶಿಕ ಮೀಸಲು ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಸಂವಿಧಾನದ 371 ಕಲಂ ಅಡಿ ತಿದ್ದುಪಡಿ ತಂದಿರುವ ಬಗ್ಗೆ.